# 54

# ಒಬ್ಬ ಪ್ರಸಂಗಿಯನ್ನು ಬಣ್ಣಿಸದೆ ನಾನು ಇರಲಾರೆ (18:24-28)

ನಾವು ಅನೇಕ ಪ್ರಸಂಗಿಗಳನ್ನು ಮೆಚ್ಚಿಕೊಳ್ಳುತ್ತೇವೆ. ಅಂಥವರ ಹೆಸರುಗಳ ಪಟ್ಟಿಯನ್ನು ಮಾಡುವುದಾದರೆ, ಬಹುಶಃ ನಾನು ಕ್ಲೂವಿ ರೋಡೆಸ್ ರವರ ಹೆಸರನ್ನು ಹೇಳುತ್ತೇನೆ, ಯಾಕೆಂದರೆ ನಾನು ಅವರಿಂದ ಪ್ರಭಾವಿತನಾಗಿರುವೆನು.[1] ಹಾಗೂ ನನ್ನ ಪಟ್ಟಿಯಲ್ಲಿ ಜಾರ್ಜ್. ಬೈಲೆ ಅವರನ್ನು ಸೇರ್ಪಡೆ ಮಾಡಿರುವೆನು. ಅಭಿಲೇನ್ ಟೆಕ್ಸ್ ಕಾಲೇಜಿನಲ್ಲಿ ಅವರು ಮಾಡಿದ್ದ ವೈವಿಧ್ಯಮಯವಾದ, 1 ಕೊರಿಂಥ 13ರ ಪ್ರಸಂಗವನ್ನು ನಾನು ನೆನಪುಮಾಡುವೆನು. ಹಾಗೂ ಅಭಿಲೇನ್ ಕ್ರಿಶ್ಚಿಯನ್ ಯೂನಿವರ್ಸಿಟಿಯಲ್ಲಿ ಅಧ್ಯಯನ ನೀಡಿದ ಬಾಟ್‌ಸೆಲ್ ಬ್ಯಾರೆಟ್ ಬಾಕ್ಸಟರ್‌ರವರನ್ನು ನೆನಪಿಸುತ್ತೇನೆ. ಹಾಗೂ ಬರವಣಿಗೆಯಿಂದ ಪರಿಚಿತರಾಗಿರುವ T. B. ಲಾರಿಮೋರ್ ರವರನ್ನು ನೆನಪಿಸುತ್ತೇನೆ.

ಸತ್ಯಕ್ಕಾಗಿ ಅವರಲ್ಲಿದ್ದ ಪ್ರೀತಿಯನ್ನು ನಾನು ಮೆಚ್ಚುತ್ತೇನೆ; ಅವರು ಸತ್ಯವನ್ನು ಪ್ರಚಾರಮಾಡಲು ತಮ್ಮನ್ನು ಒಪ್ಪಿಸಿಕೊಟ್ಟರು. ಹಾಗೂ ಕೆಲವು ಕಾಲ ಸತ್ಯವನ್ನು ಹಾಗೂ ಸುಳ್ಳನ್ನು ಪ್ರಚಾರ ಮಾಡಿದ ಇನ್ನೊಬ್ಬ ಪ್ರಸಂಗಿಯನ್ನು ನಾನು ಬಣ್ಣಿಸದೆ ಇರಲಾರೆ. ಅಪೊಸ್ತಲರ ಕೃತ್ಯಗಳು 18ರಲ್ಲಿ; ಅಪೊಲ್ಲೋಸನು ಎಂಬ ಹೆಸರನ್ನು ಹೊಂದಿದ್ದ ಆ ಮನುಷ್ಯನ ಕುರಿತಾಗಿ ನೋಡುತ್ತೇವೆ.

ಅಪೊಸ್ತಲರ ಕೃತ್ಯಗಳು 18 ವಚನ 23ರಲ್ಲಿ ಪೌಲನ ಸೇವಾಪ್ರಸಂಗದ ಮೂರನೇ ಪ್ರಯಾಣದ ಆರಂಭವನ್ನು ನೋಡುತ್ತೇವೆ: "ಪೌಲನು ಅಂತಿಯೋಕ್ಯದಲ್ಲಿ ಕೆಲವು ಕಾಲ ಇದ್ದು ತಿರಿಗಿ ಹೊರಟು ಕ್ರಮವಾಗಿ ಗಲಾತ್ಯ ಸೀಮೆಯಲ್ಲಿಯೂ, ಫ್ರುಗ್ಯದಲ್ಲಿಯೂ ಸಂಚಾರ ಮಾಡುತ್ತಾ ಶಿಷ್ಯರೆಲ್ಲರನ್ನು ದೃಢಪಡಿಸಿದನು." ನಂತರ ಅವನು "ಎಫೆಸಕ್ಕೆ ಹೋಗುವದು" ಅವನ ಗುರಿಯಾಗಿತು (19:1). ಪೌಲನು ಆ ಪಟ್ಟಣವನ್ನು ಸೇರುವುದರೊಳಗಾಗಿ, ಲೂಕನು ಇಲ್ಲಿ ಅಪೊಲ್ಲೋಸನ ಚರಿತ್ರೆಯನ್ನು ತಿಳಿಸಿ, ಪೌಲನು ಎಫೆಸಕ್ಕೆ ಬರುವ ಮುನ್ನ, ಅಲ್ಲಿ ಉಂಟಾದ ಸನ್ನಿವೇಶದ ಬಗ್ಗೆಯೂ ತಿಳಿಸಿರುವನು.

ವಚನ 24ರಲ್ಲಿ, "ಅಷ್ಟರೊಳಗೆ ಅಲೆಕ್ಸಾಂದ್ರಿಯದಲ್ಲಿ[2] ಹುಟ್ಟಿದ ಅಪೊಲ್ಲೋಸನೆಂಬ[3] ಒಬ್ಬ ಯೆಹೂದ್ಯನು ಎಫೆಸಕ್ಕೆ ಬಂದನು. ಅವನು ವಾಕ್ಚಾತುರ್ಯವುಳ್ಳವನು.[4]" ಎಂಬುದರಿಂದ ಅಪೊಲ್ಲೋಸನ ಪರಿಚಯವನ್ನು ನೀಡಲಾಗಿದೆ. ಅವನು ಸಹ ಆದಿ ಸಭೆಯಲ್ಲಿ ಪ್ರಮುಖ ಸೌವಾರ್ತಿಕನಾಗಿದ್ದನು (1 ಕೊರಿಂಥ 3:5, 6; ತೀತ 3:13). ಅವನ ತಂದೆ ತಾಯಿಗಳು ಯೆಹೂದ್ಯರಾಗಿದ್ದರೂ ಅವನು ಅಲೆಕ್ಸಾಂದ್ರಿಯದಲ್ಲಿ ಹುಟ್ಟಿದ್ದನು, ಅದು ಮಹತ್ವದ ಪಟ್ಟಣವಾಗಿತ್ತು.[5] ಅದು ನೈಲ್ ನದಿಗೆ[6] ಸಮೀಪವಾ ದ, ರೇವು ಪಟ್ಟಣವಾಗಿತ್ತು. ಅಲೆಕ್ಸಾಂದ್ರಿಯ ಮಹಾರಾಜನು ಅದನ್ನು ಕಟ್ಟಿದ್ದರಿಂದ, ಅವನ ಹೆಸರನ್ನೇ ಅದಕ್ಕೆ ನೀಡಲಾಯಿತು, ಅಲ್ಲಿ ಸಾಕಷ್ಟು ಯೆಹೂದ್ಯರಿದ್ದರು.[7] ಹಳೇ ಒಡಂಬಡಿಕೆಯ, ಹಿಂದಿನ ಮುದ್ರಣವಾದ ಗ್ರೀಕ್ ಸೆಪ್ಟಜೂಯಂಟ್‌ನ್ನು ಅಲೆಕ್ಸಾಂದ್ರಿಯದಲ್ಲಿ ಸಿದ್ದಪಡಿಸಲಾಗಿತ್ತು. ಫಿಲೋ ಎಂಬ ಯೆಹೂದ್ಯ ಪಂಡಿತನು, ಅಲೆಕ್ಸಾಂದ್ರಿಯದಲ್ಲಿ ನೆಲೆಸಿದ್ದನು.[8] ಅಪೊಲ್ಲೋಸನ ಯೋಹಾನನು ಮಾಡಿಸಿದ ದೀಕ್ಷಾಸ್ನಾನದ ಕುರಿತು ಅರಿತವನಾಗಿದ್ದರಿಂದ (ವಚನ 25), ಅವನು ತನ್ನ ಯೌವನ ಕಾಲದಲ್ಲಿ, ಪೌಲನಂತೆಯೇ ಪಾಲಿಸ್ತೇನಿನಲ್ಲಿ ಕೆಲ ಕಾಲವನ್ನು ಅಧ್ಯಯನದಲ್ಲಿ ಕಳೆದಿರಬಹುದು.[9]

ಅಪೊಲ್ಲೋಸನಲ್ಲಿದ್ದ ಸದ್ಗುಣಗಳ ವಿಚಾರದಲ್ಲಿ ದ್ಯಾನಿಸುವಾಗ ಮೆಚ್ಚುಗೆಗೆ ಪಾತ್ರವಾದ ಕೆಲವು ವಿಷಯಗಳನ್ನು ನಾನು ತಿಳಿಸುತ್ತೇನೆ.

## ಅವನು ತನ್ನ ತಲಾಂತುಗಳನ್ನು ಕರ್ತನಿಗಾಗಿ ಸಮರ್ಪಿಸಿದ್ದನು (18:24-26)

ಲೂಕನು ನೀಡಿದ ವಿವರಣೆಯಿಂದ ಅಪೊಲ್ಲೋಸನು ವಿದ್ಯಾವಂತನಾಗಿದ್ದನು ಎಂದು ತಿಳಿದು ಬರುತ್ತದೆ. ಅವನು ಅಲೆಕ್ಸಾಂಡ್ರಿಯದಲ್ಲಿ ಜನಿಸಿದವನಾಗಿ, ಪಾಲೆಸ್ತೇನಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರಿಂದ ಅವನು ಆ ದಿನಗಳಲ್ಲಿ ದೊರಕುವ ಧಾರ್ಮಿಕ ಹಾಗೂ ಲೌಕಿಕ ವಾದ ವಿದ್ಯೆಯನ್ನು ಹೊಂದಿದ್ದನು ಎಂಬ ಅಂಶವನ್ನು ನೋಡುತ್ತೇವೆ. ಲೂಕನು ಪರಿವರ್ತನೆ ಮಾಡುವ ಕುಶಲತೆಯನ್ನು[10] ಹೊಂದಿದ್ದನು ಎಂದು ತಿಳಿಯುತ್ತೇವೆ. ಈ ಮನುಷ್ಯನಲ್ಲಿದ್ದ ಈ ವಿಧವಾದ ಸದ್ಗುಣಗಳನ್ನು ನಾನು ಮೆಚ್ಚುತ್ತೇನೆ. (ಅವನ ವಾಕ್ಚಾತುರ್ಯವನ್ನು ಹೊಂದಲು ನಾನೂ ಸಹ ಬಯಸುವೆ.)

ಅಪೊಲ್ಲೋಸನು, ನಿಯಮಿತವಾಗಿ ಹೊಂದಿದ್ದ ತಲಾಂತನ್ನು ದೇವ ಸೇವೆಗೆ ಅರ್ಪಿಸಿದ್ದ ವಿಷಯವನ್ನು ನಾನು ಬಣ್ಣಿಸುತ್ತೇನೆ, ದೇವರ ವಾಕ್ಯದ ಜ್ಞಾನಾರ್ಜನೆಗೆ ತನ್ನ ತಲಾಂತನ್ನು ಪ್ರಾಯೋಜಿಸಿದ್ದನು. "ಅವನು ಕರ್ತನ ಮಾರ್ಗದ ವಿಷಯದಲ್ಲಿ ಉಪದೇಶ ಹೊಂದಿದವನಾಗಿದ್ದನು"[11] (ವಚನ 25). ಮತ್ತು ಹಳೇ ಒಡಂಬಡಿಕೆಯ ಶಾಸ್ತ್ರಗಳಲ್ಲಿ ಪ್ರವೀಣ ನಾಗಿದ್ದನು (ವಚನ 24). "ಪ್ರಸಂಗಿ" ಎಂದು ಕರೆಸಿ ಕೇಳುವವನಿಗೆ ಇರಬೇಕಾದ ಪುಸ್ತಕದ ಜ್ಞಾನವನ್ನು ಹೊಂದಿದ್ದನು! ಮತ್ತು ಅವನ ವಾಕ್ಚಾ ತುರ್ಯದ ಸಾಮರ್ಥ್ಯವನ್ನು "ದೇವರ ವಾಕ್ಯದ ಬೋಧನೆಗೆ ಮೀಸಲಿಟ್ಟಿದ್ದನು" (ವಚನ 26). ಅವನು "ಸಭಾಮಂದಿರದಲ್ಲಿ ಮಾತನಾಡುತ್ತಿದ್ದನು" (ವಚನ 25). ಅವನು ಕೇವಲ ಅವನ ಕಾರ್ಯಯೋಜನೆಯಲ್ಲಿ ತಲ್ಲೀನನಾಗಿರದೆ, ಅವನು ಅದರಲ್ಲಿ, ತನ್ನ ಹೃದಯವನ್ನೇ ಇಟ್ಟಿದ್ದನು. ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದನು[12] (ವಚನ 25). ಮತ್ತು "ಧೈರ್ಯವಾಗಿ" ಮಾತನಾಡಿದನು (ವಚನ 26).

ವಚನ 24ರಿಂದ 26ರವರೆಗೆ, ಪ್ರಸಂಗದ ಕುರಿತು ಸಣ್ಣ ಪ್ರಸಂಗವನ್ನು ಮಾಡಬಹುದು, ಒಂದು ವೇಳೆ ನೀವು ಪ್ರಸಂಗಿಗಳಾಗದೆ, ಅಥವಾ ಆಗುವ ಯೋಜನೆಯನ್ನು ಹೊಂದದೆ ಇದ್ದರೂ, ನಿಮ್ಮ ತಲಾಂತುಗಳನ್ನು ದೇವರ ಮಹಿಮೆಗಾಗಿ ಅರ್ಪಿಸಬಹುದು. ನಿಮ್ಮ ಸ್ವಂತ ಆಶೆಗಳನ್ನು ಈಡೇರಿಸಿಕೊಳ್ಳುವದಕ್ಕಾಗಿ, ದೇವರು ನಿಮ್ಮನ್ನು ತಲಾಂತುಗಳಿಂದ ಆಶೀರ್ವದಿಸಿರುವದಿಲ್ಲ. ಆ ಸಾಮರ್ಥ್ಯಗಳು, ನ್ಯಾಯಯುತವಾದ, ನಿಮ್ಮ ಜೀವಿತದಲ್ಲಿರುವ ಜವಾಬ್ದಾರಿಯ ಹೊಣೆಯಾಗಿರುತ್ತದೆ (1 ತಿಮೊಥೆ 5:8). ಅಂತಿಮವಾಗಿ ನಿಮ್ಮ ತಲಾಂತುಗಳಿದ ದೇವರಿಗೆ ಮಹಿಮೆಯಾಗ ಬೇಕು ಎಂಬುದನ್ನು ಮರೆಯಬೇಡಿರಿ (ಮತ್ತಾಯ 5:16).

## ಅವನು ನಂಬಿದಂಥದ್ದನ್ನು ಧೈರ್ಯವಾಗಿ ಸಾರಿದನು (18:25, 26)

ನಾವು ಅಪೊಲ್ಲೋಸನ ಪರಿಚಯವನ್ನು ಮಾಡಿಕೊಳ್ಳುವಂಥ ಸಮಯದಲ್ಲಿ ದೇವರ ಚಿತ್ತದ ಕುರಿತು ನಿಯಮಿತವಾದ ಜ್ಞಾನವನ್ನು ಹೊಂದಿದ್ದನು. ಅವನು ಹಳೆ ಒಡಂಬಡಿಕೆಯ ಶಾಸ್ತ್ರಗಳನ್ನು ಕಲಿತ್ತಿದ್ದನು (ವಚನ 24). ಆ ಶಾಸ್ತ್ರಗಳಲ್ಲಿದ್ದ ಮೆಸ್ಸೀಯನ ಕುರಿತು ತಿಳಿದಿದ್ದನು (ವಚನ 28). "ಯೇಸುವಿನ ಕುರಿತು ಸೂಕ್ಷ್ಮವಾಗಿ ಹೇಳಿ ಉಪದೇಶಿಸುವದನ್ನು" ಕಲಿತ್ತಿದ್ದನು (ವಚನ 25). ಆದರೆ ಅವನು "ಯೋಹಾನನು ಮಾಡಿಸಿದ ದೀಕ್ಷಾಸ್ನಾನವನ್ನು ಮಾತ್ರ ಬಲ್ಲವನಾಗಿದ್ದನು" (ವಚನ 25). ಅವನು ಯೇಸುವಿನ ಕುರಿತಾದ ಜ್ಞಾನವನ್ನು ಅಲ್ಪವಾಗಿ ತಿಳಿದಿದ್ದನು. ಈಗ ಸ್ನಾನಿಕನಾದ ಯೋಹಾನನು ಕೊಲ್ಲಲ್ಪಟ್ಟಿದ್ದನು (ಮತ್ತಾಯ 14:1-12). ಯೇಸು ದೇವಾಲಯವನ್ನು ಕಟ್ಟುತ್ತೇನೆ ಎಂದು ವಾಗ್ದಾನ ಮಾಡಿದ ಮೊದಲೇ ಆ ಕಾರ್ಯವು ಜರುಗಿತ್ತು (ಮತ್ತಾಯ 16:16-19). ಯೇಸುವಿನ, ಮರಣ ಪುನರುತ್ಥಾನ, ಹಾಗೂ ಮಹಾ

ಆ ದೇಶವನ್ನು ನೀಡುವ ಹಾಗೂ ಆತನು ಪರಲೋಕಕ್ಕೆ ಏರಿ ಹೋಗುವ ಮೊದಲೇ ಇದು ನಡೆದಿತ್ತು ಆಗ ಯೋಹಾನನು ಪರಿಶುದ್ಧಾತ್ಮನ ಬರುವಿಕೆಯ ಕುರಿತು ಮಾತನಾಡಿದ್ದನು (ಮತ್ತಾಯ 3:11), ಆದರೆ ಅವನು ಅದರ ನೆರವೇರಿಕೆಯ ಬಗ್ಗೆ ಏನನ್ನು ತಿಳಿದಿರಲಿಲ್ಲ (ಅಪೊಸ್ತಲರ ಕೃತ್ಯಗಳು 1:4-8; 2:1-4), ಮತ್ತು ಸಭೆಯ ಸ್ಥಾಪನೆ ಹಾಗೂ ಕ್ರೈಸ್ತ ಆರಾಧನೆಯ ಬಗ್ಗೆಯು ಅವನು ಅರಿತಿರಲಿಲ್ಲ.

ಅಪೊಲ್ಲೋಸನು ಯೋಹಾನನ ಸ್ನಾನದ ಕುರಿತು ಅರಿತ್ತಿದ್ದರೂ, ಯೇಸು ಕ್ರಿಸ್ತನ ಪೂರ್ಣ ಜ್ಞಾನವು ಅವನಿಗೆ ಏಕೆ ಇರಲಿಲ್ಲ ಎಂದು ಲೂಕನು ತಿಳಿಸಿರುವದಿಲ್ಲ. ಒಂದು ವೇಳೆ ಅಪೊಲ್ಲೋಸನು ಯೋಹಾನನ ಸಮಯದಲ್ಲಿ ಪಾಲಿಸ್ತೇನದಲ್ಲಿದ್ದು, ಅವನ ಶಿಷ್ಯನಾಗಿರಬಹುದು (ಮತ್ತಾಯ 3:5, 6) ಅಥವಾ, ಐಗುಪ್ತದಲ್ಲಿ[13] ಸಂಚರಿಸುತ್ತಿದ್ದ, ಯೋಹಾನನ ಶಿಷ್ಯನಿಂದ ತರಬೇತಿ ಪಡೆದಿರಬಹುದು ಒಂದು ವೇಳೆ ಅವನು ಪಾಲಿಸ್ತೇನಿನಲ್ಲಿ, ಯೋಹಾನನ ಶಿಷ್ಯನಾಗಿದಿದ್ದರೆ, ಅವನು ಅರ್ಥಮಾಡಿಕೊಂಡಿದ್ದ ವಿಷಯವನ್ನು ಸಾರಲು ಆ ದೇಶದಿಂದ ಹೊರಟಿರಬಹುದು. ಹೇಗಿದ್ದರೂ ಪಂಚಾಶತ್ತಮ ದಿನದಿಂದ ಅವನು ಪಾಲಿಸ್ತೇನದಲ್ಲಿ ಇಲ್ಲದಿರಬಹುದು (ಅಪೊಸ್ತಲರ ಕೃತ್ಯಗಳು 2), ಅಥವಾ ಅವನ ಮಾರ್ಗಮಧ್ಯದಲ್ಲಿ ಯೇಸುವಿನ ತಿಳುವಳಿಕೆ ಇದ್ದವರನ್ನು ಅವನು ಸಂಧಿಸದೇ ಇರಬಹುದು.[14] ಆದ್ದರಿಂದ, ಅವನು ತಾನು ಅರಿತ್ತಿದ್ದ, ಯೋಹಾನನ ದೀಕ್ಷಾಸ್ನಾನದ ಕುರಿತು ಸಾರುತ್ತಿದ್ದನು.

ಯೋಹಾನನ ದೀಕ್ಷಾಸ್ನಾನದ ಕುರಿತು ಕೆಲವು ವಿಚಾರಗಳನ್ನು ಅರಿಯಲೇಬೇಕು. ಮೆಸ್ಸೀಯನ ಮಾರ್ಗವನ್ನು ಸಿದ್ಧಪಡಿಸುವ ಪ್ರವಾದನೆಯನ್ನು ನೆರವೇರಿಸಲು ಯೋಹಾನನು ಬಂದನು (ಯೆಶಾಯ 40:3; ಮಲಾಕಿ 4:5, 6; ಮತ್ತಾಯ 3:1-3; 17:10-13). ಸಿದ್ಧಪಡಿಸುವ ಕ್ರಮದಲ್ಲಿ, ಅವನ ಕೇಳುಗರು ಮಾನಸಾಂತರಪಟ್ಟು ದೇವರ ಕಡೆಗೆ ತಿರುಗಬೇಕೆಂದು ಸಾರಿದನು (ಮತ್ತಾಯ 3:2; ಲೂಕ 3:7-14) ಅದನ್ನು "ಮಾನಸಾಂತರದ ದೀಕ್ಷಾಸ್ನಾನ ಎಂದು" ಕರೆಯುತ್ತಿದ್ದರು. ಅದು ಮುಳುಗಿಸುವ ಸ್ನಾನವಾಗಿತ್ತು (ಯೋಹಾನ 3:23; ಮತ್ತಾಯ 3:5, 6). ಪಾಪದ ಮಾನಸಾಂತರವಾಗಿತ್ತು (ಮಾರ್ಕ 1:4). ಅವನು ದೀಕ್ಷಾಸ್ನಾನವನ್ನು ಮಾನಸಾಂತರವನ್ನು ಒತ್ತಿ ಹೇಳಿದನು (ಮಾರ್ಕ 1:4; ಅಪೊಸ್ತಲರ ಕೃತ್ಯಗಳು 13:24; 19:4). "ಅವನ ಬಳಿಗೆ ಬಂದವರು ಯೋರ್ದಾನ್ ಹೊಳೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು, ನಂತರ ಪಾಪವನ್ನು ಅರಿಕೆ ಮಾಡಿದರು" (ಮತ್ತಾಯ 3:6). ದೀಕ್ಷಾಸ್ನಾನವು ಯೋಹಾನನ ಸೇವೆಯ ಪ್ರಮುಖ ಅಧ್ಯತೆಯಾಗಿದ್ದರಿಂದ "ಅವನನ್ನು" ಸ್ನಾನಿಕನಾದ ಯೋಹಾನನು ಎಂದು ಕರೆದರು [ಮುಳುಗಿಸುವವನು] (ಮತ್ತಾಯ 3:1). "ಸ್ನಾನಿಕನು" ಅಂದರೆ "ದೀಕ್ಷಾಸ್ನಾನ" ಮಾಡಿಸುವವನು ಎಂಬ ಅರ್ಥವಾಗಿದೆ. ಅವನ ಸೇವಾ ಸಮಯದಲ್ಲಿ, ದೇವರನ್ನು ಒಪ್ಪಿದವನಿಗೂ, ಮತ್ತು ದೇವರನ್ನು ಒಪ್ಪದವನಿಗೂ, ದೀಕ್ಷಾಸ್ನಾನವು ಮಧ್ಯ ರೇಖೆಯನ್ನು ಹಾಕುತ್ತಿತು (ಲೂಕ 7:30).

ನಮ್ಮ ಈ ಅಧ್ಯಯನದಲ್ಲಿ, ಯೋಹಾನನ ಸ್ಥಾನವನ್ನು ಕ್ರೈಸ್ತರಾದ ನಾವುಗಳು ನಿರಂತರವಾಗಿ ನೆನಪು ಮಾಡಿಕೊಳ್ಳಬೇಕೆಂಬದು ದೇವರ ಯೋಜನೆಯಲ್ಲಿ ಮಹಾ ಅಪ್ಪಣೆಯಲ್ಲಿ ದೇವರು ತಿಳಿಸಿರುವರು ತಂದೆ, ಮಗ ಹಾಗೂ ಪರಿಶುದ್ಧಾತ್ಮನ (ಮತ್ತಾಯ 28:19, 20; ಮಾರ್ಕ 16:15, 16) ಮತ್ತು ಆತನ ಹೆಸರಿನಲ್ಲಿ ಮಾಡಿಸುವ ದೀಕ್ಷಾಸ್ನಾನವೇ ನಿಜವಾದ ದೀಕ್ಷಾಸ್ನಾನವಾಗಿದೆ (ಮತ್ತಾಯ 28:20). ಆದ್ದರಿಂದ, ಅದು, ಒಂದೇ ದೀಕ್ಷಾಸ್ನಾನವಾಗಿದೆ (ಎಫೆಸ 4:5). ಈಗ ಅದು ದೇವರ ಯೋಜನೆ ಹಾಗೂ ಉದ್ದೇಶದ ಒಂದು ಅಂಗವಾಗಿದೆ. ಮಹಾ ಆ ದೇಶದ ಮೇರೆಗೆ ಪ್ರಾರಂಭವಾದ ದೀಕ್ಷಾಸ್ನಾನ, ಅದರ ಸಾರುವಿಕೆ, ಹಾಗು ಆಚರಣೆಯ ಸಮಯದವರೆಗೆ ಮಾತ್ರ ಯೋಹಾನನ ಸ್ನಾನವು ಚಾಲನೆಯಲ್ಲಿತ್ತು (ಅಪೊಸ್ತಲರ ಕೃತ್ಯಗಳು 2); ಅನಂತರ ಅದು ತನ್ನ ಬೆಲೆಯನ್ನು ಕಳೆದು ಕೊಂಡಿತು. ಯೋಹಾನನ ಸ್ನಾನವು ಯೇಸುವಿನ ತಿಳುವಳಿಕೆಯನ್ನು ಹೊಂದದೆ ಇದ್ದದ್ದರಿಂದ, ಅದರಲ್ಲಿ ಪ್ರಮುಖ

ಸಮಸ್ಯೆ ಉಂಟಾಗಿತ್ತು. "ಮುಂದೆ ಬರುವವನನ್ನು ನಂಬಿರಿ ಎಂಬ ತತ್ವವನ್ನು ಮಾತ್ರ ಯೋಹಾನನು ಸಾರಿದನು ..." (19:4).[15]

ಅಪೊಲ್ಲೋಸನು ತಿಳಿದಿದ್ದ ದೀಕ್ಷಾಸ್ನಾನವು ರದ್ದಾಗಿದ್ದರೂ, ಅದರಲ್ಲಿದ ನಂಬಿಕೆಯನ್ನು ಅವನು ಸಾರುತ್ತಿದ್ದನು ಎಂಬುದನ್ನು ನಾನು ಒತ್ತಿ ಹೇಳುತ್ತೇನೆ, ಅದರ ಕುರಿತು ಅವನು ಮನವರಿಕೆ ಮಾಡಿಕೊಂಡಿದ್ದನು. ಮುಂದಿನ ಅಧ್ಯಾಯದ ಪ್ರಾರಂಭದಲ್ಲಿ, ಅವನು ಈ ಬೋಧನೆಯನ್ನು ಎಫೆಸದಲ್ಲಿ ಮಾಡಿ, ಅನೇಕರನ್ನು ಪರಿವರ್ತಿಸಿದ್ದನು ಎಂದು ನೋಡುತ್ತೇವೆ (ಎಫೆಸ 19:1-6).

ಅವನು ತಪ್ಪಾದ ಬೋಧನೆಯನ್ನು ಬೋಧಿಸಿದ್ದರಿಂದ, ನಾನು ಅವನನ್ನು ಬಣ್ಣಿಸಲಾರೆ ಎಂದು ಧೈರ್ಯದಿಂದ ಹೇಳುತ್ತೇನೆ; ತಪ್ಪುಗಳು ಆತ್ಮವನ್ನು ನಾಶಮಾಡುತ್ತದೆ (ಯಾಕೋಬ 5:20). ಅವನಲ್ಲಿ ಈ ಅಜ್ಞಾನವಿದ್ದದ್ದರಿಂದ, ಅವನು ದೇವರನ್ನು ಮೆಚ್ಚಿಸಲಿಲ್ಲವೆಂದು ನಾನು ಹೇಳುತ್ತಿರುವದಿಲ್ಲ: ಆ ಜ್ಞಾನವು ಪಾಪ ಪ್ರಜ್ಞೆಯನ್ನು ತೆಗೆಯುವದಿಲ್ಲ (ಅಪೊಸ್ತಲರ ಕೃತ್ಯಗಳು 17:30; ರೋಮಾಪುರ 10:1-4). ಅವನು ತನ್ನ ಅಜ್ಞಾನದಲ್ಲೇ ಮುಂದುವರೆಯದ ವಿಚಾರವನ್ನು ನಾನು ಮೆಚ್ಚಿರುವೆನು ಎಂದು ಮುಂದೆ ತಿಳಿಸುವೆನು. ನಾನು ಟಿವಿಯನ್ನು ನೋಡುವಾಗ, ವಿವಿಧ ಬೋಧನೆಗಳನ್ನು ಗಮನಿಸುತ್ತೇನೆ, ಕೆಲವು ಪ್ರಸಂಗಿಗಳಲ್ಲಿ ತಪ್ಪುಗಳಿದ್ದರೂ ಅವರನ್ನು ನಾನು ಮೆಚ್ಚುತ್ತೇನೆ; ಯಾಕಂದರೆ ಅವರು ಮಾಡುವಂತ ವಿಷಯಗಳಲ್ಲಿ ಯಥಾರ್ಥವಾಗಿರುತ್ತಾರೆ. ಕೆಲವರನ್ನು ನಾನು ಗೌರವಿಸುವದಿಲ್ಲ; ಅವರು ಸುವಾರ್ತೆಯನ್ನು ಸಾರುವದರ ಮೂಲಕ ವ್ಯಾಪಾರ ಮಾಡುವವರಾಗಿರುತ್ತಾರೆ (ಮತ್ತಾಯ 7:20; 2 ಪೇತ್ರ 2:3; KJV).

ಯಥಾರ್ಥತೆಯು ಮಾತ್ರ ಸಾಕಾಗುವದಿಲ್ಲ - ಪೌಲನು ಯಥಾರ್ಥವಾಗಿ ಕ್ರೈಸ್ತರನ್ನು ಹಿಂಸಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 23:1) ಆದರೆ - ಕಪಟದಿಂದ ತುಂಬಿರುವಂತಹ ಪ್ರಪಂಚದಲ್ಲಿ, ಯಥಾರ್ಥವಾಗಿ ಪರಿವರ್ತನೆಗೊಂಡವರನ್ನು ಕಂಡುಕೊಳ್ಳುವದು ಚೈತನ್ಯವನ್ನುಂಟು ಮಾಡುತ್ತದೆ. ಒಬ್ಬ ಪ್ರಪಂಚದ ನಾಯಕನು ಸಾರ್ವಜನಿಕರ ಸಲಹೆಗಳ ಮೇರೆಗೆ ಆಡಳಿತ ನಡೆಸುವನು, ಮತ್ತು ಕೆಲವು ಧಾರ್ಮಿಕ ನಾಯಕರುಗಳು ಸಹ ಅದೇ ವಿಧವಾದ ನಿಯಮಗಳನ್ನು ಪಾಲಿಸುವರು: "ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು" (ಎಫೆಸ 4:14) ಇದು ಪ್ರಸಿದ್ಧವಾದ ಅಭಿಪ್ರಾಯ. ತಾನು ನಂಬಿರುವ ಧರ್ಮವೆ ಶ್ರೇಷ್ಟವೆಂದು ಪ್ರತಿಪಾದಿಸುವವನಿಗೆ "ಕರ್ತನ ಮಾರ್ಗದ ಉಪದೇಶವನ್ನು ಸ್ಪಷ್ಟವಾಗಿ ತಿಳಿಸಿದರೆ, ಅವನು ಶ್ರೇಷ್ಟವಾದ ಸೇವಕನಾಗುವನು!" ಇದರ ಮೂಲಕ ಅಪೊಲ್ಲೋಸನಲ್ಲಿರುವ ಮೆಚ್ಚುಗೆಗೆ ಪಾತ್ರವಾದ ಗುಣವನ್ನು ನೋಡುತ್ತೇವೆ.

## ಅವನು ತಪ್ಪನ್ನು ಒಪ್ಪಿಕೊಳ್ಳುವದರಲ್ಲಿ ಅವನು ಹೆಮ್ಮೆಪಡಲಿಲ್ಲ (18:26)

ಒಂದು ಸಬ್ಬತ್ ದಿನದಲ್ಲಿ, ಅಕ್ವಿಲ ಮತ್ತು ಪ್ರಿಸ್ಕಿಲ್ಲರು ಎಫೆಸದ ಸಭಾಮಂದಿರಕ್ಕೆ ಹೋದರು[16] ಅಧ್ಯಾಯ 18ರಲ್ಲಿ ಅಕ್ವಿಲ ಮತ್ತು ಪ್ರಿಸ್ಕಿಲರು ಗುಡಾರ ನೇಯುವವರಾಗಿದ್ದರಿಂದ, ಅವರೊಂದಿಗೆ ಪೌಲನು ಎಫೆಸದಲ್ಲಿ ತಂಗಿದ್ದು ಅಂತಿಯೋಕ್ಯದ ಸಿರಿಯಕ್ಕೆ ಹಿಂದಿರುಗಿದ್ದನು (ವಚನ 19). ಬಹುಶಃ ಈ ಸಭಾಮಂದಿರಲ್ಲಿಯೇ ಪೌಲನಿಗೆ ಉತ್ತಮ ಪ್ರತಿಕ್ರಿಯೆ ದೊರೆತಿರಬಹುದು (ವಚನಗಳು 19-21). ಬೋಧನೆಯ ಸಮಯ ಬಂದಾಗ ಒಬ್ಬ ವಿಶೇಷ ವ್ಯಕ್ತಿಯು ಸಭಾಮಂದಿರದಲ್ಲಿ ಧೈರ್ಯದಿಂದ ಮಾತನಾಡುವದಕ್ಕೆ ಪ್ರಾರಂಭಿಸಿದನು[17] (ವಚನ 26ಎ). ಅವನು *ಯೇಸುವಿನ* ಕುರಿತು ಮಾತಾಡಿದನು (ವಚನ 25ಎ). ಅಕ್ವಿಲ ಮತ್ತು ಪ್ರಿಸ್ಕಿಲ್ಲರು[18] ವಾಕ್ಚಾತುರ್ಯವುಳ್ಳ ಈ ಮನುಷ್ಯನ ಮಾತುಗಳನ್ನು ಕೇಳಿಸಿಕೊಂಡಾಗ ಅವನು ಸ್ನಾನಿಕನಾದ ಯೋಹಾನನ ದೀಕ್ಷಾಸ್ನಾನವನ್ನು ಅರಿತಿದ್ದನೆ ವಿನಃ, ರಕ್ಷಕನ ತಿಳುವಳಿಕೆಯನ್ನು ಪೂರ್ಣವಾಗಿ ತಿಳಿದಿರಲಿಲ್ಲ. ಕೂಟದ ನಂತರ, ಅವರು "ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಇನ್ನೂ ಸೂಕ್ಷ್ಮವಾಗಿ ವಿವರಿಸಿದರು" (ವಚನ 26ಬಿ). NIVಯಲ್ಲಿ

“ಅವರು ಅವನನ್ನು ಮನೆಗೆ[19] ಆಹ್ವಾನಿಸಿ ದೇವರ ಮಾರ್ಗವನ್ನು ಅವನಿಗೆ ಸ್ಪಷ್ಟವಾಗಿ ವಿವರಿಸಿದರು” ಅವರು ಯೋಹಾನನ ಪ್ರವಾದನೆಯಿಂದ ಆರಂಭಿಸಿ (ಮತ್ತಾಯ 3:11) ಆ ಪ್ರವಾದನೆಗಳು ನೆರವೇರಿದ ಸಂಗತಿಯನ್ನು ಅವನಿಗೆ ತಿಳಿಸಿಕೊಟ್ಟರು.

ಯಾರೋ ಒಬ್ಬರು ತಪ್ಪನ್ನು ಬೋಧಿಸುವಾಗ ಪ್ರಿಸ್ಕಿಲ್ಲ ಮತ್ತು ಅಕ್ವಿಲರು ಅವನನ್ನು ನಡೆಸಿಕೊಂಡ ರೀತಿಯ ವಿಚಾರದಲ್ಲಿ ಒಂದು ವಿಶೇಷ ಪಾಠವನ್ನೇ ಮಾಡಬಹುದು: (1) ತಪ್ಪಿನ ಅರಿವನ್ನು ಗ್ರಹಿಸುವ ಪೂರ್ಣ ತಿಳುವಳಿಕೆಯವನ್ನು ಹೊಂದಿದ್ದರು. (2) “ಅವನ ಯಥಾರ್ಥತೆಯನ್ನು ನೋಡಿ” ಅವನು ಬೋಧಿಸುತ್ತಿದ್ದ ತಪ್ಪನ್ನು ಸರಿಯೆಂದು ಅವರು ನಂಬಲಿಲ್ಲ. (3) “ಪೌಲನು ಇಲ್ಲದಿದ್ದರೆ ಅವನೇ ಉಪದೇಶ ಮಾಡಬಹುದಿತ್ತು” ಎಂದು ಅವರು ತಿಳಿಯದೇ ಅವನಲ್ಲಿದ್ದಂತ ಜವಾಬ್ದಾರಿಯನ್ನೇ ಹೊಂದಿದವರಾಗಿ ಅಪಲ್ಲೋಸನಿಗೆ ಉಪದೇಶಿಸಿದರು. (4) ಅವನಲ್ಲಿದ್ದ ಉತ್ತಮವಾದ ಅಂಶವನ್ನು ಕಂಡು ಹಿಡಿದರು. ಅವನನ್ನು ತಪ್ಪು ಬೋಧಕನೆಂದು ಪರಿಗಣಿಸಲಿಲ್ಲ; ಅವನು ಯಥಾರ್ಥಹೃದಯವನ್ನು ಹೊಂದಿದವನಾಗಿ ಅವರ ಸಲಹೆಗಳನ್ನು ಒಪ್ಪಿಕೊಂಡಿದ್ದನು. (5) ಅಪೊಲ್ಲೋಸನ ಕುರಿತಾಗಿ ಇತರರೊಂದಿಗೆ ಮಾತನಾಡದೆ, ಅವನನ್ನು ವ್ಯಕ್ತಿಗತವಾಗಿ ಸಂಧಿಸಿದರು (ಮತ್ತಾಯ 18:15). (6) ಅವನನ್ನು ಬಹಿರಂಗವಾಗಿ ಖಂಡಿಸದೇ; “ಅವನನ್ನು ಪ್ರತ್ಯೇಕವಾಗಿ ಕರಕೊಂಡು ಹೋಗಿ ಮಾತನಾಡಿದರು - ಪ್ರಾಯಶಃ ಅವರ ಮನೆಗೆ ಕರಕೊಂಡು ಹೋಗಿರಬಹುದು.” (7) ಅವರು ಅವನನ್ನು ಶಾಂತ ಭಾವದಿಂದ ನಡೆಸಿಕೊಂಡರು (ಗಲಾತ್ಯ 6:1). ಅವನ ಬೋಧನೆಯನ್ನು ಅವರು ಪ್ರತಿವಾ ದಿಸದೇ, “ದೇವರ ಮಾರ್ಗವನ್ನು ಅವನಿಗೆ *ಸೂಕ್ಷ್ಮವಾಗಿ* ತಿಳಿಸಿದರು.” (ಒತ್ತಿ ಹೇಳಿದ್ದು ನನ್ನದು.) (8) “ಸೂಕ್ಷ್ಮ” ಎಂಬ ಪದವನ್ನು ಬಳಸಿರುವದರಿಂದ “ಅವನ ಉಪದೇಶವು ಸರಿಯಾದದ್ದೆ” ಎಂದು ಹೇಳುವದರ ಮೂಲಕ ಅವನ ತಪ್ಪಿನ ಬಗ್ಗೆ ವಿರೋಧ ವ್ಯಕ್ತಿಪಡಿಸಲಿಲ್ಲ, ಅವನಲ್ಲಿದ್ದದ್ದನ್ನೇ ವೃದ್ಧಿಸಿದರು. ಈ ವಿಧವಾದ ಕಾರ್ಯವು ಕರ್ತನ ದೃಷ್ಟಿಯಲ್ಲಿ ಬಹು ಬೆಲೆಯುಳ್ಳದ್ದಾಗಿರುತ್ತದೆ.[20]

ಒಂದು ಕ್ಷಣ, ಪ್ರಸಂಗಿಯ ದೃಷ್ಟಿಕೋನದಿಂದ ಈ ಅಂಶವನ್ನು ದೃಷ್ಟಿಸೋಣ ನೀವು ಅಪೊಲ್ಲೋಸನಾಗಿದ್ದಿಯೆಂದು ಊಹಿಸಿಕೋಳ್ಳಿ, ಒಬ್ಬ ಜ್ಞಾನದ ವಾಕಾ ಚಾತುರ್ಯಯುಳ್ಳ ವನಾಗಿರಬಹುದು. ಸಭಾ ಮಂದಿರಲ್ಲಿ, ನೀವು ಹೃದಯ ಪೂರ್ವಕ ಮಾತನಾಡಿ ನಿಮ್ಮ ಕೇಳುಗರನ್ನು ಪರಿವರ್ತನೆಗೆ ನಡೆಸುತ್ತಿರುವಿರಿ. ಆದರೆ ನಿಮ್ಮ ಕೇಳುಗರ ಭಾವನೆಗಳನ್ನು ಗಮನಿಸುವಾಗ ಅವರು ಕಠಿಣ ಹೃದಯದವರೆಂದು ತಿಳುಕೊಳ್ಳುವಿರಿ. ಕೂಟವಾದ ನಂತರ, ಬೇಸರದಿಂದ ನೀವು ಅಧೈರ್ಯಗೊಂಡಿರುವಾಗ ಇಬ್ಬರು ದಂಪತಿಗಳು ನಿಮ್ಮನ್ನು ತಮ್ಮ ಮನೆಗೆ ಆಹ್ವಾನಿಸಬಹುದು. ನೀವು ಅವರ ಮನೆಯಲ್ಲಿ ವಿಶ್ರಾಂತಿ ಪಡೆಯುವಾಗ, ನೀವು ಮಾಡಿದ ಪ್ರಸಂಗದಲ್ಲಿದ್ದ ತಪ್ಪುಗಳ ಕುರಿತು ಆ ದಂಪತಿಗಳು ವಿಷಾದ ವ್ಯಕ್ತಪಡಿಸಿದರೆ! ಅದಕ್ಕೆ ನೀವು ಹೇಗೆ ಪ್ರತಿಕ್ರಿಯಿಸಬಹುದು? ಒಂದು ವೇಳೆ ಅಪೊಲ್ಲೊಸನು ಪ್ರತಿಕ್ರಿಯಿಸಬಹುದು: “ನನ್ನನ್ನು ಟೀಕಿಸುವದ್ಕೆ ನೀವು ಎಷ್ಟರವರು? ನಾನು ಅಲೆಕ್ಸಾಂದ್ರಿಯದಲ್ಲೂ ಮತ್ತು ಯೆರೂಸಲೇ ಮಿನಲ್ಲೂ, ಪಂಡಿತರುಗಳಲ್ಲಿ ಕಲಿತವನೂ ಆಗಿರುವೇನು! ನಿಮಗಿಂತಲೂ ನೂರು ಪಟ್ಟು ಹೆಚ್ಚಾದ ಶಾಸ್ತ್ರಜ್ಞಾನವನ್ನು ಹೊಂದಿರುವೆನು! ಹಾಗಿದ್ದಲ್ಲಿ ನೀವು ನನ್ನಂತವನಿಗೆ ಸಲಹೆ ನೀಡಬಹುದೇ?”

ಪ್ರಿಸ್ಕಿಲ ಮತ್ತು ಅಕ್ವಿಲ್ಲರು ಅವನಿಗೆ “ದೇವರ ಮಾರ್ಗವನ್ನು ಸೂಕ್ಷ್ಮವಾಗಿ ವಿವರಿಸಿದರು” ಎಂದು ಹೇಳಿಕೆಯಲ್ಲಿ ಅಪೊಲ್ಲೋಸನ ಹೃದಯದಾಳವನ್ನು ದೃಷ್ಟಿಸಬಹುದು. ಅವನು ಹೆಚ್ಚು ಕಲಿತವನಾಗಿದ್ದರೂ, ಅವನು ಎಲ್ಲವನ್ನು ತಿಳಿದವನೆಂದು ಭಾವಿಸಿರಲಿಲ್ಲ. ಅವನು ಯೇಸುವಿನ ಬಗ್ಗೆ ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದ್ದರು, ಅವನು ಕೇಳಿಸಿಕೊಳ್ಳುವದಕ್ಕೆ ಕಿವಿ ತೆರೆದು ಕೊಂಡವನಾಗಿದ್ದನು ಪ್ರಮುಖವಾಗಿ ಅವನು ಸತ್ಯವನ್ನು ಪ್ರೀತಿಸುವವನಾಗಿದ್ದನು (2 ಥೆಸಲೋನಿಕ 2:10); ಅವನ ಹೆಮ್ಮೆಗಿಂತಲೂ, ಸತ್ಯವು ಅವನಿಗೆ ಪ್ರಮುಖವಾಗಿತ್ತು.

ಆದ್ದರಿಂದ ಪ್ರಿಸ್ಕಿಲ ಮತ್ತು ಅಕ್ವಿಲರು ಅವನಿಗೆ ಉಪದೇಶ ಮಾಡಿದರು, ನಂತರ ಅವನು ತನ್ನ ತಪ್ಪಾಭಿಪ್ರಾಯವನ್ನು ಒಪ್ಪಿಕೊಂಡನು. ಇದು ಈ ಮನುಷ್ಯನಲ್ಲಿದ್ದ ವಿಶೇಷವಾದ ಸದ್ಗುಣ.

ಅಪೊಸ್ತಲರ ಕೃತ್ಯಗಳು 18:24-26 ಚರ್ಚಿಸುವಾಗ, ಈ ಅಂಶದ ಕುರಿತು ಒಬ್ಬರು ಈ ವಿಧವಾದ ಪ್ರಶ್ನೆಯನ್ನು ಕೇಳಿರುವರು "ಮುಂದಿನ ಅಧ್ಯಾಯದಲ್ಲಿ ಶಿಷ್ಯರು ಪುನಃ ಮುಳುಗಿಸಲ್ಪಟ್ಟಂತೆ, ಅಪೊಲ್ಲೊಸನಿಗೂ, ಮುಳುಗಿಸಬೇಕಾಯಿತೇ? ಈ ಪ್ರಶ್ನೆಯನ್ನು ಒಂದು ಗಂಟೆಯ ಕಾಯ ಚರ್ಚಿಸಬಹುದು,[21] ಅಂತ್ಯದಲ್ಲಿ ಇಲ್ಲಿ ಯಾರೂ ವಿವೇಕಿಗಳಾಗಿರುವದಿಲ್ಲ.[22] ಒಂದು ವೇಳೆ ಇದು ತಿಳಿಸಲು ಯೋಗ್ಯವೆಂದು ಲೂಕನು ತಿಳಿದಿರಬಹುದು ಯಾಕಂದರೆ ಅದು ನಮ್ಮ ಮೇಲೆ ನೇರ ಪರಿಣಾಮ ಬೀರುವದಿಲ್ಲ (ಯೇಸು ಮರಣವನ್ನು ಹೊಂದುವದಕ್ಕಿಂತ ಮೊದಲು ಜೀವದಿಂದ ಇದ್ದ ಯಾರೊಬ್ಬರೂ ಸಹ ಯೋಹಾನನ ಸ್ನಾನವನ್ನು ಹೊಂದಿರಲಿಲ್ಲ). ಈ ಕಾರಣದಿಂದ, ಅಪೊಲ್ಲೊಸನು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯತೆಯಿತು, ಅವನು ದೇವರನ್ನು ಮೆಚ್ಚಿಸುವದಕ್ಕೆ ಏನನ್ನಾದರೂ ಮಾಡಲು ಸಿದ್ಧನಾಗಿದ್ದನು.

ನಮ್ಮ ಕುರಿತಾಗಿ ಏನು? ಅಪೊಲ್ಲೊಸನ ಹಾಗೆ ಯಥಾರ್ಥವಾದ ಹೃದಯವನ್ನು ನಾವು ಹೊಂದಿರುವೆವೋ? ಉಪದೇಶ ಹೊಂದಲ ಸಿದ್ಧವಾಗಿದ್ದೇವೋ? ನಾವು ತೆರೆದ ಮನಸ್ಸುಳವ ರಾಗಿದ್ದೆವೋ? ಹೆಮ್ಮೆ ಪಡದೆ, ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧವಿರುವೆವೋ? ನಾವು ಈಗಾಗಲೇ ನಂಬಿರುವ ತಪ್ಪನ್ನು ಬಿಟ್ಟು, ಸತ್ಯವನ್ನು ಸ್ವಿಕಾರ ಮಾಡಲು ಸಿದ್ಧವಾಗದ್ದೇವೋ?

## ಅವನು ಆತನ ಸೇವೆಯಲ್ಲಿ ಮುಂದುವರೆದನು (18:27, 28)

ನಾನು ಕೆಲವರಿಗೆ, ದೇವರ ಮಾರ್ಗವನ್ನು ಸೂಕ್ಷ್ಮವಾಗಿ ತಿಳಿಸಿದಾಗ ಅವರು ತಮ್ಮ ತಪ್ಪನ್ನು ಗ್ರಹಿಸಿಕೊಂಡು, ಸತ್ಯವನ್ನು ಒಪ್ಪಕೊಂಡರೂ, ತಮ್ಮ ಕುಟಂಬದವರು, ಸ್ನೇಹಿತರೂ, ಅಥವಾ ಇತರರು ಇವರ ಕುರಿತು ಬೇರೆ ಭಾವಿಸಬಹುದು ಎಂದು ತಿಳಿದು ಸತ್ಯವನ್ನು ನಿರಾ ಕರಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಅಪೊಲ್ಲೊಸನು ಯಾವುದೇ ವಿಧವಾದ ಅವಮಾನವನ್ನು ಸಹಿಸಲು ಸಿದ್ಧನಾಗಿದ್ದನು. ಅವನು ಮುಂದಿನ ಸಬ್ಬತ್ತಿನಲ್ಲಿ ಸಭಾಮಂದಿರಕ್ಕೆ ಹೋಗಿ, ಅವನು ಹೊಸದಾಗಿ ಕಲಿತ್ತಿದ್ದ ಸತ್ಯಗಳನ್ನು ಧೈರ್ಯವಾಗಿ ಸಾರಿದನು. ನಮ್ಮ ಹಾಗೆ, ಈ ಪ್ರಸಂಗಿಯು ಸಹ ಜ್ಞಾನದಲ್ಲೂ, ಮತ್ತು ಯಜಮಾನನ ಸೇವೆಯಲ್ಲೂ ವೃದ್ಧಿಗೊಂಡನು.

ಕೆಲವು ಸಮಯದ ನಂತರ,[23] ಅವನು ಅಖಾಯಕ್ಕೆ ಹೊರಟನು, ಈ ಹಿಂದೆ ಪೌಲನು ಸೇವೆ ಮಾಡಿದ್ದ ಗ್ರೀಸ್ ದೇಶಕ್ಕೆ ಹೋದನು. "ಆ ಮೇಲೆ ಅಖಾಯಕ್ಕೆ[24] ಹೋಗಬೇಕೆಂದು ಅವನಿಗೆ ಮನಸ್ಸಾದಾಗ, ಸಹೋದರರು[25] ಅವನನ್ನು ಪ್ರೋತ್ಸಾಹ ಗೊಳಿಸಿ ಅಲ್ಲಿದ್ದ ಶಿಷ್ಯರಿಗೆ ಇವನನ್ನು[26] ಸೇರಿಸಿಕೊಳ್ಳಬೇಕೆಂದು ಪತ್ರಿಕೆಯನ್ನು ಬರೆದುಕೊಟ್ಟರು"[27] (ವಚನ 27ಎ). ಪೌಲನು ಸೇವೆ ಮಾಡುತ್ತಿದ್ದ ಕೊರಿಂಥವು ಅವನ ಗುರಿಯಾಯಿತು (19:1).

ಅಪೊಲ್ಲೋಸನು ಕೊರಿಂಥಕ್ಕೆ ಬಂದು, ಕ್ರೈಸ್ತರೊಂದಿಗೂ, ಕ್ರೈಸ್ತರಾಗುವದಕ್ಕೆ ಇದ್ದವರೊಂದಿಗೂ ಕೆಲಸ ಮಾಡಿದನು. ಮೊದಲನೆಯದಾಗಿ ಅವನು ಸಭೆಯಲ್ಲಿದ್ದವರಿಗೆ "ಬಹಳ ವಾಗಿ ಸಹಾಯಮಾಡಿದನು, ದೇವರ ಕೃಪೆಯಿಂದ ನಂಬಿದವರಿಗೆ ಸಹಾಯಿಸಿದನು"[28] (18:27ಬಿ). "ಕೊರಿಂಥದ ಕ್ರೈಸ್ತರು ಸ್ವೀಕರಿಸುವುದರಲ್ಲಿ ಸಿದ್ಧ ರಾಗಿದ್ದರು" (1 ಕೊರಿಂಥ 1:12; 3:4, 22; 4:6).[29] "ಅವನು ಕೂಡ ಎಲ್ಲರ ಮುಂದೆ ಯೆಹೂದ್ಯರನ್ನು ಬಲವಾಗಿ ಖಂಡಿಸಿದನು" (ಅಪೊಸ್ತಲರ ಕೃತ್ಯಗಳು 18:28ಎ), ಅವನು ಅಕ್ವಿಲ ಮತ್ತು ಪ್ರಿಸ್ಕಿಲ್ಲರಲ್ಲಿ ಕಲಿತು ಕೊಂಡಹಾಗೆ, "ಯೇಸುವೇ ಕ್ರಿಸ್ತನೆಂದು ಶಾಸ್ತ್ರಾಧಾರದಿಂದ ತೋರಿಸಿಕೊಟ್ಟನು" (ವಚನ 28ಬಿ). ಇದೇ ಯೆಹೂದ್ಯರ ಸೇವೆ ಯಲ್ಲಿ ಪೌಲನಿಗಿಂತಲೂ, ಅಪೊಲ್ಲೋಸನು ಹೆಚ್ಚಾದ ಯಶಸ್ವಿಯನ್ನು ಸಾಧಿಸಿರಬಹುದು, ಈ ಕಾರಣದಿಂದಲೇ ಸಭೆಗಳಲ್ಲಿ ವಿವಿಧ ತಲಾಂತುಗಳನ್ನು ಹೊಂದಿರುವ ಪ್ರಸಂಗಿಗಳನ್ನು ಹೊಂದಿರುತ್ತೇವೆ (ವಚನಗಳು 12-17). ಲೂಕನ ಮಾತುಗಳಲ್ಲಿ ಯಾವುದೇ ವಿಧವಾದ ತಾರತಮ್ಯವಿರುವದಿಲ್ಲ

ನಂತರ ಪೌಲನು ಕೊರಿಂಥದವರಿಗೆ ಬರೆಯುವಾಗ: "ಅಪೊಲ್ಲೋಸನು ಯಾರು? ಪೌಲನು ಯಾರು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ, ಕರ್ತನು ಒಬ್ಬೊಬ್ಬರಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ. ನಾನು ಸಸಿ ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರೇ" (1 ಕೊರಿಂಥ 3:5, 6).

ನಾವು ಮತ್ತು ನೀವೂ ಶಾಸ್ತ್ರಾಧಾರದಲ್ಲಿಯೂ ಮತ್ತು ನಮ್ಮ ಕರ್ತನ ಸೇವೆಯಲ್ಲಿಯೂ ಬೆಳೆಯುತ್ತಿದ್ದೇವೋ? ಅಥವಾ ನಮ್ಮ ಗೊಂದಲದಲ್ಲಿಯೇ ಇದ್ದೇವೋ? ಯೇಸು ನಮ್ಮನ್ನು ನೋಡಿ, "ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳೆದುಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ" (ಯೋಹಾನ 4:35); "ಬೆಳೆಯು ಬಹಳ ಕೆಲಸದವರು ಸ್ವಲ್ಪ" (ಮತ್ತಾಯ 9:37). ದೇವರ ಹೊಲದಲ್ಲಿ ಲಾಭ ತರುವ ಕೆಲಸಗಾರರಾಗಿರುವಂತೆ, ದೇವರು ನಮಗೆ ಸಹಾಯಿಸಲಿ!

## ಮುಕ್ತಾಯ

ಅಪೊಸ್ತಲರ ಕೃತ್ಯಗಳು 18:23-19:1ರಲ್ಲಿ ಅಪೊಲ್ಲೋಸನ ಕುರಿತು ಕಡೆಯ ಸಾರಿ ನೋಡುತ್ತೇವೆ. ಒಂದು ಯೋಚನೆಯ ಪ್ರಕಾರ ಅವನು ಎಫೆಸಕ್ಕೆ ಹಿಂದಿರುಗಿ, ಪೌಲನ ಸ್ನೇಹಿತನಾದನು (1 ಕೊರಿಂಥ 16:12). ಸ್ವಲ್ಪ ಕಾಲದ ನಂತರ ಇನ್ನೊಬ್ಬ ಸಹೋದರನು ಹಾಗೂ ತೀತನು ಕ್ರೇತಕ್ಕೆಗೆ ಹೋದರು, ಅಲ್ಲಿ ಪೌಲನ ಒಬ್ಬ ಸಹಾಯಕನು ಕೆಲಸ ಮಾಡುತ್ತಿದ್ದನು (ತೀತ 3:13). ಈ ವಿಷಯದ ಹೊರತು, ಅಪೊಲ್ಲೋಸನ ಕುರಿತು ಇನ್ನು ಯಾವುದೇ ಸಂಗತಿಯನ್ನು ಕೇಳಿರುವದಿಲ್ಲ. ನನ್ನ ಅಭಿಪ್ರಾಯದಂತೆ, ಅವನು ಯೇಸುವಿನ ಸೇವೆಯಲ್ಲಿ ತನ್ನ ತಲಾಂತನ್ನು ಬಳಸಿರಬಹುದು.

ಅಪೊಲ್ಲೊಸನ ಮುಖಾಂತರ, ಅನೇಕ ಪಾಠಗಳನ್ನು ನಾವು ಕಲಿಯಬಹುದೆಂಬ ಸೂಚನೆಗಳನ್ನು ಈ ಪಾಠದಲ್ಲಿ ನೀಡಿರುವೆನು. ಅಂತಿಮವಾಗಿ ಎರಡು ವಿಚಾರವನ್ನು ತಿಳಿಸುತ್ತೇನೆ: (1) ಒಬ್ಬನು ತಪ್ಪನ್ನು ಉಪದೇಶಿಸುವಾಗ, ಅಕ್ವಿಲ ಹಾಗೂ ಪ್ರಿಸ್ಕಿಲ್ಲರ ಕ್ರಮವನ್ನೇ ಅನುಸರಿಸೋಣ. (2) ಒಬ್ಬರು ನಮಮ ತಪ್ಪನ್ನು ತಿದ್ದುವಾಗ, ಅಪೊಲ್ಲೋಸನಿಲ್ಲಿದ್ದ, ಅಧೀನತೆ ನಮ್ಮಲ್ಲಿಯೂ ಇರಲಿ, ಪ್ರಿಸ್ಕಿಲ್ಲ ಮತ್ತು ಅಕ್ವಿಲರ ಸ್ವಭಾವವು ನಮ್ಮಲ್ಲಿರುವುದಾದರೆ, ನಮ್ಮ ಮುಂದೆ ಇರುವ ಧಾರ್ಮಿಕ ಗೊಂದಲಗಳು ಹಾಗೂ ವಿಭಜನೆಗಳು ಇಲ್ಲವಾಗುತ್ತವೆ.

## ಪ್ರಸಂಗದ ಟಿಪ್ಪಣಿ

ಅಪೊಲ್ಲೋಸನ ಗುಣಗಳ ಕುರಿತು ಪಾಠವನ್ನು ಹೇಳುವುದಾದರೆ, ಅವನ ನಂತರದ ಸೇವೆಯ ಕುರಿತು ವಿವರಿಸಿರಿ. ಮುಖ್ಯವಾಗಿ ಅವನ ಕೊರಿಂಥದ ಸೇವೆಯ ಕುರಿತು ಹೇಳಿರಿ. ಮಾರ್ಟಿನ್ ಲೂಥರ್ (ಹಾಗೂ ಇತರರು) ಅಪೊಲ್ಲೋಸನೇ ಇಬ್ರಿಯ ಪತ್ರಿಕೆಯ ಬರಹಗಾರನು ಎಂದು ಹೇಳಿರುವರು, ಯಾಕಂದರೆ ಅದರಲ್ಲಿ ಅಲೆಕ್ಸಾಂದ್ರಿಯದ ಶೈಲಿಯು, ಮತ್ತು ವಾದವೂ ಇರುತ್ತದೆ. ಈ ಕುರಿತ ನಿಜಾಂಶಗಳು ಏನೇ ಇರಲಿ, ಅವನು ಆಪತ್ರಿಕೆಯನ್ನು ಬರೆಯುವ ಸಾಮರ್ಥ್ಯ ಹೊಂದಿದ್ದೆ, ಅದೇ ಅವನ ಕುರಿತ ಸಾಕ್ಷಿ ಎಂದು ಕೆಲವರು ತಿಳಿಸುತ್ತಾರೆ.

ಅಪೊಸ್ತಲರ ಕೃತ್ಯದಿಂದ ಪರಿವರ್ತನೆಗೊಂಡವರ ಕುರಿತು ಪ್ರಸಂಗಿಸಲು ಅಪೇಕ್ಷಿಸಿದರೆ, (*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಪುಟ 38ನ್ನು ನೋಡಿರಿ), "ಪ್ರಸಂಗಿಯ ಪರಿವರ್ತನೆ" ಎಂಬುದಕ್ಕೆ ಸಾಕಷ್ಟು ಪುರಾವೆಗಳು ಅದರಲ್ಲಿವೆ. (ಪರಿವರ್ತನೆ ಅಂದರೆ,

ಬದಲಾವಣೆ ಎಂಬುದನ್ನು ನೆನಪು ಮಾಡಿಕೊಳ್ಳಿರಿ [*ಅಪೊಸ್ತಲರ ಕೃತ್ಯಗಳು, 3* ಪುಸ್ತಕದಲ್ಲಿ ಪುಟ 37 ನೋಡಿರಿ].) ಈ ಕೆಳಗೆ ಸರಳ ಮುಖಾಂಶಗಳನ್ನು ನೀಡಲಾಗಿದೆ:

I. ಪರಿವರ್ತನೆಯ ಅವಶ್ಯವಿದ್ದ ಪ್ರಸಂಗಿ
   A. ಅವನಲ್ಲಿ ಅನೇಕ ಉತ್ತಮವಾದ ಸದ್ಗುಣಗಳಿದ್ದವು.
   B. ದೀಕ್ಷಾಸ್ನಾನದ ಕುರಿತು ತಪ್ಪಾಭಿಪ್ರಾಯ ಹೊಂದಿದ್ದನು.
II. ಪರಿವರ್ತನೆಗೊಂಡ ಪ್ರಸಂಗಿ
   A. ಅವನ ತಪ್ಪನ್ನು ಕೆಲವರು ಸರಿಪಡಿಸಿದ್ದರಿಂದ ಅವನು ಪರಿವರ್ತನೆಗೊಂಡನು.
   B. ಅವನು ತನ್ನ ತಪ್ಪನ್ನು ಸರಿಪಡಿಸಿಕೊಳ್ಳುವಷ್ಟು ತಗ್ಗಿದವನಾದ್ದರಿಂದ ಪರಿವರ್ತನೆಗೊಂಡನು.

ವಚನ 24ರಿಂದ 26 ರವರೆಗಿನ ವಾಕ್ಯಭಾಗವು ಯೌವನಸ್ಥ ಪ್ರಸಂಗಿಗಳಿಗೆ ಬೆಲೆಯುಳ್ಳ ಅಂಶಗಳನ್ನು ನೀಡುತ್ತದೆ. "ಕಲಿಯುವಂಥದ್ದೇ" ಕಡೆಯ ಅಂಶವಾಗಿರುತ್ತದೆ.

"ತಪ್ಪನ್ನು ಸರಿಪಡಿಸುವ" ಕುರಿತು, ಅಕ್ವಿಲ ಮತ್ತು ಪ್ರಿಸ್ಕಿಲ್ಲರ ವಿಷಯದಲ್ಲಿ ನೀಡಿ ರುವ ಎಂಟು ಅಂಶಗಳನ್ನು ವಿಸ್ತರಣೆ ಮಾಡಬಹುದು (ಅಜ್ಞೆಯವರ ತಲೆ ಬರಹ) ತಪ್ಪು ಮಾಡುವವರನ್ನು ಮೃದು ಧೋರಣೆ ತೋರದೆ, ವಿವೇಕವುಳ್ಳವರಾಗಿ ಎದುರಿಸಬೇಕು.

---

ಟಿಪ್ಪಣಿಗಳು

[1]ಅನೇಕ ಸುವಾರ್ತಿಕರ ಪ್ರಸಂಗದಿಂದ ನಾನು ಪ್ರಭಾವಿತನಾಗಿರುವೆನು, ಅವರೆಲ್ಲರ ಹೆಸರನ್ನು ಇಲ್ಲಿ ತಿಳಿಸದೆ ಇರುವದರಿಂದ, ಅವರಲ್ಲಿ ನಾನು ಕ್ಷಮೆಯನ್ನು ಕೋರುವೆನು. [2]ಅಪೊಲ್ಲೊಸಿಯಸ್, ಸಣ್ಣ ಹೆಸರೇ "ಅಪೊಲ್ಲೋಸ." [3]ಗ್ರೀಕ್‌ನ "ಹುಟ್ಟಿದಾರಭ್ಯ" ಅಂದರೆ, ಅಪೊಲ್ಲೋಸನು ಅಲೆಕ್ಸಾಂದ್ರಿಯದಲ್ಲಿ ಹುಟ್ಟಿ ಬೆಳೆನು ಅವನ ಜನಾಂಗಿಯ ಮೂಲ. [4]"ವಾಕ್ಚಾತುರ್ಯ" ಅಂದರೆ ಗ್ರೀಕ್ ನಲ್ಲಿ "ಕಲಿತವನು" (NIV). [5]ಅಲೆಕ್ಸಾಂದ್ರಿಯವು ಪ್ರಮುಖ ತರಬೇತಿ ಕೇಂದ್ರವಾಗಿತ್ತು, ಅದು ಪ್ರಪಂಚದ ಅತಿ ದೊಡ್ಡ ಗ್ರಂಥಾಲಯವಾಗಿದ್ದು, 700,000 ಪುಸ್ತಕಗಳನ್ನು ಹೊಂದಿತ್ತು. [6]ಪೌಲನ "ಪ್ರಥಮ ಹಾಗೂ ಎರಡನೆಯ ಪ್ರಯಾಣದ" ನಕ್ಷೆಯನ್ನು ನೋಡಿರಿ. [7]ಅಲೆಕ್ಸಾಂದ್ರಿಯದಲ್ಲಿ ಶೇಕಡ 25ರಷ್ಟು ಯೆಹೂದ್ಯರು ವಾಸಿಸಿದ್ದರು. [8]ಫಿಲೋಮೋನ ಎಂಬುವನು ಪೌಲನ ಹಾಗೂ ಅಪೊಲ್ಲೋಸನ ಸಮಕಾಲಿನವನು. [9]ಪೌಲ ಹಾಗೂ ಅಪೊಲ್ಲೋಸನ ಹಿನ್ನೆಲೆ ಒಂದೆ ವಿಧವಾಗಿತ್ತು. ಪೌಲನು ತಾರ್ಸದವನು ಅದು ಸಹ ಕಲಿಕೆಯ ಕೇಂದ್ರವಾಗಿತ್ತು. ಅವರಿಬ್ಬರೂ ತೀವ್ರವಾಗಿ ತಲಾಂತುಗಳನ್ನು ಹೊಂದಿದ್ದು, ಅವುಗಳನ್ನು ದೇವರ ಮಹಿಮೆಗಾಗಿ ಬಳಸಿದರು. [10]"ರೆಟೂರಿಕ್" ಅಂದರೆ "ವಾಕ್ಚಾತುರ್ಯ" ಅಲೆಕ್ಯಾಂದ್ರವು ಇದರ ಕಲಿಕೆಯ ಕೇಂದ್ರವಾಗಿತ್ತು.

[11]"ಮಾರ್ಗ" ಎಂಬುದು ಕ್ರೈಸ್ತತ್ವ ಎಂದಿದ್ದರೂ, ಮಾರ್ಗದ ಬದಗಲು ಕರ್ತನ "ಮಾರ್ಗ" ಎಂದು ಹೇಳಲಾಗಿದೆ (ಮತ್ತಾಯ 3:3; ಮಾರ್ಕ 1:3; ಲೂಕ 3:4; ಯೋಹಾನ 1:23). [12]ಕೆಲವು ಅನುವಾದಕರು "ಆಸಕ್ತ ಚಿತ್ತರಾಗಿರಿ" ಎಂದು ಹೇಳಿರುವರು ರೋಮಾಪುರ 12:11. [13]ಅಪೊಲ್ಲೊಸನು, ಯೋಹಾನನ ಸ್ನಾನದ ಕುರಿತು ಅಲೆಕ್ಸಾಂದ್ರಿಯದಲ್ಲಿ ಕಲಿತನು ಎಂದು ವೆಸ್ಟರ್ನ್‌ಟೆಕ್ಸ್ ತಿಳಿಸುತ್ತದೆ. ರಾಬರ್ಟ್ ಎಂಬ ಬೋಧಕರು ಹೇಳುವಂತೆ ಯೋಹಾನನ ಶಿಷ್ಯರಲ್ಲಿ ಕೆಲವರು ಮೆಸ್ಸಿಯನಲ್ಲಿ ನಂಬಿಕೆ ಇಟ್ಟಿರಲಿಲ್ಲ, ಅವನು ಯೋಹಾನನ ಸುವಾರ್ತೆಯನ್ನು ಮಾತ್ರ ಸಾರಿದರು ಎಂದು ಲೌಕಿಕ ಲೇಖಕರು ತಿಳಿಸಿರುವರು. [14]ಯೋಹಾನನು ಬೋಧಿಸಿ 25 ವರ್ಷಗಳ ಕಳೆದಿದ್ದರಿಂದ ಅದು ಒಂದು ಗೌಪ್ಯತೆಯನ್ನು ಮಾತ್ರ ತಿಳಿಸುತ್ತಿತ್ತು. ಆ ದಿನಗಳಲ್ಲಿ ಅವನು ಯಾವುದೇ ಕ್ರೈಸ್ತರನ್ನು ಸಂಧಿಸುವ ಸಾಧ್ಯತೆಗಳಿರುವದಿಲ್ಲ. ಅಪೊಲ್ಲೋಸನು, ಯೋಹಾನನಿಂದ ಬೋಧನೆಯನ್ನು ಪಡೆಯದೆ ಅವನ ಶಿಷ್ಯರಿಂದ, ಹೊಂದಿರಬಹುದು ಎಂಬ ಸೂಚನೆಗಳಿವೆ. [15]ದೀಕ್ಷಾಸ್ನಾನದ ಕುರಿತು "ದೀಕ್ಷಾಸ್ನಾನವಲ್ಲದ, ದೀಕ್ಷಾಸ್ನಾನ ಎಂಬ ಪಾಠವನ್ನು ನೋಡಿರಿ. [16]ಅವರು ಅಲ್ಲಿ ಆರಾಧನೆಗೂ ಮತ್ತು ಪೌಲನ ಉದ್ದೇಶವನ್ನೇ ಹೊಂದಿದವರಾಗಿ, ಯಥಾರ್ಥ ಹೃದಯಗಳನ್ನು ಸಂಧಿಸಲು ಹೋಗಿರಬಹುದು. [17]ಪೌಲನಂತೆ, ಅಪೊಲ್ಲೋಸನು ಸಹ ಸಭಾಮಂದಿರಕ್ಕೆ ಹೋಗುವ ಮೂಲಕ ಹೊಸ ಸೇವೆ ಯನ್ನು ಆರಂಭಿಸಿದನು. [18]ವಚನ 26ರ ಕುರಿತು ವೆಸ್ಟರ್ನ್ ಪುಸ್ತಕದಲ್ಲಿ, ಅಕ್ವಿಲ ಎಂಬ ಹೆಸರನ್ನು ಮೊದಲನೆಯದಾಗಿ ತಿಳಿಸಿ, ಇತರೆ ಬರವಣಿಗೆಯ ಪ್ರಕಾರ ಪ್ರಿಸ್ಕಿಲ್ಲ ಎಂಬ ಹೆಸರನ್ನು ಮೊದಲಿಗೆ ತೋಲಿಸಲಾಗಿದೆ. ಇದರಿಂದ ಅವಳು ಸಭೆಯಲ್ಲಿ ಪ್ರಮುಖ

ಸ್ಥಾನ ಹೊಂದಿರಬಹುದೆಂಬ ಸೂಚನೆಯಿದೆ. ಅವರು ಅಪೊಲ್ಲೋಸನನ್ನು ತಮ್ಮ ಮನೆಗೆ ಕರೆದಾಗ, ಪ್ರಿಸ್ಕಿಲ ಅಡಿಗೆ ಮಾಡಿ ದಳು, ಅಕ್ವಿಲ ಬೋಧಿಸಿದನು ಎಂಬುದಾಗಿ ಇರುವದಿಲ್ಲ (ನನ್ನ ಯೌವನ ಕಾಲದ ಜೀವಿತದಲ್ಲಿ ಹಿರಿಯ ಸಹೋದರಿಯರು ನನಗೆ ದೇವ ಮಾರ್ಗವನ್ನು ಸೂಕ್ಷ್ಮವಾಗಿ ತಿಳಿಸಿದ್ದರು). ಈ ಖಾಸಗಿಯಾದ ಕಾರ್ಯವು ಸ್ತ್ರೀಯರನ್ನು ವೇಧಿಕೆಗೆ ಆಹ್ವಾನಿಸುವದಿಲ್ಲ. [19]"ಅವರು ಅವನನ್ನು ಕರಕೊಂಡು ಹೋದರು" ಎಂದು ಮೂಲ ಭಾಷೆಯಲ್ಲಿದೆ. "ಮನೆಗೆ" "ಬದಿಗೆ" ಸಾಯಂಕಾಲದ ಊಟಕ್ಕೆ ಕರೆದರು ಎಂಬದಾಗಿದೆ, ಮನೆಯ ಸುವಾರ್ತೆ ಸೇವೆಗೆ ಇದು ಮಾದರಿಯಾಗಿದೆ. [20]ಹೊಸ ಪ್ರಸಂಗಿಗಳಿಗೆ ವಿಶೇಷ ವಿಚಾರವಾಗಿದೆ. "ಭಾರವಾದ ಸುತ್ತಿಗೆಯಿಂದ ಕ್ರಮ" ಪಡಿಸ ಬೇಕು ಎಂಬ ತತ್ವವು, ಯೌವನ ಪ್ರಸಂಗಿಗಳಿಗೆ, ಅಧೈರ್ಯವು ನೀಡುವುದರಿಂದ ಅವರು ಸೇವೆಯನ್ನು ನಿರಾಕರಿಸುತ್ತಾರೆ.

[21]ಯೇಸುವಿನ ಮರಣಕ್ಕಿಂತ ಮೊದಲು, ಯೋಹಾನನ ಸ್ನಾನ ಹೊಂದಿದ್ದವರು ಪುನಃ ದೀಕ್ಷಾಸ್ನಾನ ಹೊಂದುವ ಅಗತ್ಯವಿಲ್ಲ. ದೇವರು ಅವರನ್ನು ತಾನೇ ತನ್ನ ಸಭೆಗೆ ಸೇರಿಸಿರುವರು. ಅದಕ್ಕೆ ಅಪೊಸ್ತಲರೇ ನಿದರ್ಶನವಾಗಿದ್ದಾರೆ. ಅವರು ಸಹ ನಿಶ್ಚಯವಾಗಿ ಯೋಹಾನನ ಸ್ನಾನವನ್ನು ಹೊಂದಿರಬಹುದು (ಲೂಕ 7:29, 30; ಯೋಹಾನ 1:25-51; 3:22, 26; 4:1, 2). ಪಂಚಾಶತ್ತಮ ದಿನದಂದು ನಿಶ್ಚಯವಾಗಿ ಅಪೊಸ್ತಲರು ಸ್ನಾನ ಹೊಂದಲಿಲ್ಲ. ವಚನ 25ರ ಆತ್ಮ ಅಂದರೆ, ಪರಿಶುದ್ಧಾತ್ಮ (ನೋಡಿರಿ ಟಿಪ್ಪಣಿ 12) ಅಪೊಲ್ಲೊಸನು ಈಗಾಗಲೇ ಕ್ರೈಸ್ತನಾಗಿದ್ದರಿಂದ, ಅವನಿಗೆ ಸ್ನಾನದ ಅಗತ್ಯವಿರಲಿಲ್ಲ. ಈ ಚರ್ಚೆಯಲ್ಲಿ ಸಂದೇಹಗಳಿವೆ. ಅಭಿಪ್ರಾಯಗಳನ್ನು ಒತ್ತಿಹೇಳಬಾರದು. [22]ಇತರ ಸಮಸ್ಯೆಗಳೊಂದಿಗೆ, ಅಪೊಲ್ಲೊಸನ ದೀಕ್ಷಾಸ್ನಾನವು, ಪಂಚಾಶತ್ತಮದ ಹಿಂದೆ ಅಥವಾ ನಂತರ ಆಯಿತು ಎಂಬುದನ್ನು ಲೂಕನು ತಿಳಿಸಿರುವದಿಲ್ಲ. ಪಂಚಾಶ್ತಮದ ಮೊದಲ ಆಯಿತು ಎಂಬ ಅನೇಕ ಅಭಿಪ್ರಾಯಗಳಿವೆ, ಆದರೆ ವಾಕ್ಯವು ಈ ವಿಷಯದಲ್ಲಿ ಮೌನವಾಗಿದೆ. [23]ಪ್ರಿಸ್ಕಿಲ ಮತ್ತು ಅಕ್ವಿಲ್ಲರ ಸಂಗಡ ಚರ್ಚೆಯಾದ ನಂತರ ಆಗಿರಬಹುದು. ಅಪೊಸ್ತಲರ ಕೃತ್ಯಗಳು 19ರಲ್ಲಿ ಅಪೊಸ್ತಲರು ಇನ್ನೂ ಏಕೆ ಯೋಹಾನನ ಸ್ನಾನದ ಕುರಿತು ಮಾತ್ರ ಅರಿತಿದ್ದರು ಎಂಬ ಚರ್ಚೆಯಿದೆ. [24]ಕೊರಿಂಥದವರು ಎಫೆಸದಲ್ಲಿ ಅಪೊಲ್ಲೊಸನ ಪ್ರಸಂಗವನ್ನು ಕೇಳಿ, ಅವನನ್ನು ಕೊರಿಂಥಕ್ಕೆ ಆಹ್ವಾನಿಸಿರಬಹುದು, ಅಕ್ವಿಲ ಮತ್ತು ಪ್ರಿಸ್ಕಿಲ ಕೊರಿಂಥ ಸಭೆಯ ಕುರಿತು ಅವನಿಗೆ ಹೇಳಿರಬಹುದು. [25]"ಸಹೋದರರು" ಎಂಬ ಹೇಳಿಕೆಯಲ್ಲಿ ಅಕ್ವಿಲ ಮತ್ತು ಪ್ರಿಸ್ಕಿಲರು ಒಳಗೊಂಡಿರಬಹುದು. ಎಫೆಸದಲ್ಲಿ ಸಭೆಯಾಯಿತು ಎಂಬ ಸೂಚನೆ ಇದೆ. ಸಭೆಯು ಈಗಾಗಲೇ ಅಕ್ವಿಲ ಮತ್ತು ಪ್ರಿಸ್ಕಿಲರ ಮನೆಯಲ್ಲಿ ಸೇರುತ್ತಿತ್ತು (1 ಕೊರಿಂಥ 16:19). [26]ಸಹೋದರರು ಇನ್ನೊಂದು ಕಡೆ ಪ್ರಸಂಗಿಸಲು ಹೋಗುವಾಗ, ನಾವು ಅವರನ್ನು ಅಧೈರ್ಯಪಡಿದೆ, ಉತ್ತೆಜಿಸಬೇಕು. [27]ಪತ್ರವನ್ನು ಅವರ ಕೈಯಲ್ಲಿ ರವಾನೆ ಮಾಡುವದು ಯೋಗ್ಯವೇ. ಅಕ್ವಿಲ ಮತ್ತು ಪ್ರಿಸ್ಕಿಲರ ಹೆಸರು, ಅದಕೆಕ ಹೆಚ್ಚಿನ ಒತ್ತು ನೀಡಿತ್ತು. [28]ದೇವರ ಕೃಪೆಯು, ಅವರಿಗೆ ಕ್ರೈಸ್ತರಾಗುವ ಅವಕಾಶವನ್ನು ನೀಡಿತ್ತು ಮತ್ತು ಕೃಪೆಯಿಂದಲೇ ಅವರಿಗೆ ರಕ್ಷಣೆಯಾಗಿತ್ತು. [29]ಗ್ರೀಕರು ವಾಕ್ಚಾತುರ್ಯದಲ್ಲಿ ಆನಂದಗೊಂಡಿದದರು. ಆದ್ದರಿಂದ ಪೌಲನಿಗಿಂತಲೂ, ಅಪೊಲ್ಲೊಸನನ್ನು ಕೆಲವರು ಇಷ್ಟಪಟ್ಟಿದ್ದರು (1 ಕೊರಿಂಥ 2:1). ಆದಾಗ್ಯು ಅಪೊಲ್ಲೊಸನು ಈ ವಿಚಾರವನ್ನು ಉತ್ತೇಜಿಸಲಿಲ್ಲ. ಪೌಲ ಮತ್ತು ಅಪೊಲ್ಲೊಸಹ ವೈರಿಗಳಾಗಿರಲಿಲ್ಲ, ಇಬ್ಬರಲ್ಲೂ ಒಳ್ಳೆಯ ಸಂಬಂಧವಿತ್ತು (1 ಕೊರಿಂಥ 16:12; ತೀತ 3:13).